# ಸೈಬರ್ ವಾರ್ತಿಕ

## ಜೂನ್ 2022

# CYBER VARTIKA

## JUNE 2022

## ಈ ಸಂಚಿಕೆಯಲ್ಲಿ

- ಮುನ್ನುಡಿ
- ಸಂಗ್ರಹಿಸಿದ ಸುದ್ದಿ
- ಇನ್ಫೋಗ್ರಾಫಿಕ್ಸ್ ಮತ್ತು ಪೋಸ್ಟರ್‌ಗಳು
- ರಸಪ್ರಶ್ನೆ ಸ್ಪರ್ಧೆ ವಿಜೇತರು
- ಸೈಸೆಕ್ನ ವೀಕರಣ

## IN THIS ISSUE

- Foreword
- Curated news
- Infographics and posters
- Quiz contest winners
- CySecK updates

**ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ!**
***https://zcmp.in/BH6y***

**If Cyber Vartika was forwarded to you by a friend, get it directly every month by SUBSCRIBING HERE!**
**https://zcmp.in/BH6y**

CySeck CoE @CySecKCoE CySecKCoE CySecK CySecK CySecK



# FOREWORD

ಸೈಬರ್ ವಾರ್ತಿಕಾದ ಮತ್ತೊಂದು ಸಂಚಿಕೆಗೆ ನಿಮಗೆ ಸ್ವಾಗತ. ಅಗತ್ಯವಾದ ಸೈಬರ್ ಸುರಕ್ಷತೆ ತಿಳಿವು ಹಾಗೂ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಹಲವಾರು ಸೈಬರ್ ಅಪರಾಧಗಳನ್ನು ಹತ್ತಿಕ್ಕಲು ಕರ್ನಾಟಕ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳನ್ನು ಮುನ್ನೆಲೆಗೆ ತರುವುದೇ ಈ ಸುದ್ದಿಯೋಲೆಯ ಗುರಿಯಾಗಿದೆ.
ನಮ್ಮ ಡಿಜಿಟಲ್ ಅಡಿಗುರುತು ಹೆಚ್ಚುತ್ತಿದ್ದಂತೆ, ಸೈಬರ್ ಅಪರಾಧ ಚಟುವಟಿಕೆಗಳೂ ಹೆಚ್ಚುತ್ತವೆ. ಇದನ್ನು ಎದುರಿಸುವ ಸರಿಯಾದ ದಾರಿಯೆಂದರೆ, ನಮ್ಮ ತಿಳಿವನ್ನು ಹೆಚ್ಚಿಸಿಕೊಳ್ಳುವುದು.
ಜನರ ಕಣ್ಣಿಗೆ ಮಣ್ಣೆರಚಿ ಅವರ ಹಣವನ್ನು ದೋಚಲು ಮೋಸಗಾರರು ಹೊಚ್ಚಹೊಸ ಬಗೆಗಳಲ್ಲಿ ಹೊಂಚುಹಾಕುತ್ತಲೇ ಇರುತ್ತಾರೆ. ಇಂತಹವರಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಲು ಇರುವುದು ಒಂದೇ ದಾರಿ – ನಮ್ಮ ಅರಿವಿನ ಮಟ್ಟವನ್ನು ಹಿಗ್ಗಿಸಿಕೊಳ್ಳುವುದು. ಬೆನಿಲ್ಡ್ ಜೋಸೆಫ್ ಎಂಬ ಬರಹಗಾರರು ಒಮ್ಮೆ ಹೀಗೆ ಹೇಳಿದ್ದರು, “ನೀವು ನಿಮ್ಮ ಮನೆಗೆ ಬೀಗ ಹಾಕಿದ್ದೀರಿ. ನಾನು (ಒಬ್ಬ ಕಳ್ಳ) ನಿಮ್ಮ ಬೀಗ ಮುರಿಯುವುದಿಲ್ಲ. ನಿಮ್ಮನ್ನು ಮರುಳುಮಾಡಿ ನೀವೇ ಬೀಗ ತೆಗೆಯುವಂತೆ ಮಾಡುತ್ತೇನೆ. ಇಂದಿನ ಯುಗದಲ್ಲಿ ಬೀಗ ಎಷ್ಟು ಗಟ್ಟಿಯಾಗಿದೆ ಎಂಬುದು ಲೆಕ್ಕಕ್ಕೇ ಬರುವುದಿಲ್ಲ...ಇದನ್ನು ತಡೆಯಲು ನಿಮ್ಮ ತಿಳಿವನ್ನು ಹೆಚ್ಚಿಸಿಕೊಳ್ಳುವುದೊಂದೇ ದಾರಿ.”
ವ್ಯಕ್ತಿಗತವಾಗಿ ಹಾಗೂ ಒಂದು ಸಮುದಾಯವಾಗಿ ಇಂದು ನಮಗೆ ತುಂಬ ಮುಖ್ಯವಾದದ್ದು ಏನೆಂದರೆ, ಡಿಜಿಟಲ್ ಅಡಿಗುರುತುಗಳನ್ನು ಬಿಡುವ ಮುನ್ನ, ನಮ್ಮ ಡಿಜಿಟಲ್ ಅಡಿಗುರುತುಗಳು ಎಷ್ಟರ ಮಟ್ಟಿಗೆ ಸುರಕ್ಷಿತವಾಗಿವೆ ಎಂದು ನಾವು ಪೂರ್ತಿಯಾಗಿ ಅರ್ಥಮಾಡಿಕೊಂಡು, ಎಚ್ಚರಿಕೆ ವಹಿಸುವುದು. ಸಂದೇಶಗಳನ್ನು ನಂಬುವುದು ಹಾಗೂ UPI ನಲ್ಲಿ ಪಾವತಿ ಮಾಡುವಾಗ ಹೆಚ್ಚಿನ ಗಮನ ಕೊಡದೆ ಇರುವಂತಹ ಸಣ್ಣ ವಿಷಯಗಳಿಂದ ದೊಡ್ಡ ತೊಡಕುಗಳು ಉಂಟಾಗಬಹುದು. ಅಗತ್ಯವಾದ ತಿಳಿವನ್ನು ಬೆಳೆಸಿಕೊಳ್ಳುವುದರಿಂದ ಇಂತಹ ಸನ್ನಿವೇಶಗಳು ಆಗದಂತೆ ನೋಡಿಕೊಳ್ಳಬಹುದು.
ನಮ್ಮ ನಾಗರಿಕರ ಅರಿವನ್ನು ಹಿಗ್ಗಿಸಿ, ಈಗ ನಡೆಯುತ್ತಿರುವ ಹಲವು ಬಗೆಯ ಸೈಬರ್ ಅಪರಾಧಗಳ ಕಡೆ ಅವರ ಗಮನ ಸೆಳೆಯುವುದೇ “ಸೈಬರ್ ವಾರ್ತಿಕಾ” ಸುದ್ದಿಯೋಲೆಯ ಗುರಿಯಾಗಿದೆ. ಸೈಬರ್ ಅಪರಾಧಗಳನ್ನು ಕೊನೆಗಾಣಿಸಲು ಮತ್ತು ಮೋಸಮಾಡುವ ಭಕ್ಷಕರಿಂದ ನಮ್ಮ ನಾಗರಿಕರನ್ನು ಕಾಪಾಡಲು ನಾವೆಲ್ಲ ಪಣ ತೊಡೋಣ.

-ಶೀತಲ್ ಮೆಹ್ತ
ಗ್ರೂಪ್ ಸಿಐಎಸ್‌yಓ ,ವಿಪ್ರೊ ಲಿಮಿಟೆಡ್

Welcome to yet another edition of Cyber Vartika. The newsletter aims to bring to the fore the required cyber security awareness & steps the Government of Karnataka is taking on various cybercrimes that are taking place in the state.

As our digital footprint expands so will be cybercrime activity. And the best way to combat this is awareness.
Fraudsters are constantly coming up with new ways to trick people into loosening their purse strings and the only key to protecting oneself is to be aware.
Benild Joseph, an author once said, "It's like you are putting a lock on your home and I (a fraudster) am not breaking it actually. I'm tampering your mind and making you do it. How secure is the lock doesn't matter in today’s world ...and the only way to counter it is awareness."

What is most important for us as a individual & as a community is to fully understand and be aware of the security controls our digital footprints carry before we extensively utilize these digital footprints. Simple aspects like trusting messages and not giving enough attention to direction of payments in UPI for example are classic scenarios which can be avoided through the required individual awareness.
The “Cyber Vartika” newsletter aims to bolster the knowledge of our citizens and draw attention to the various types of cybercrimes that are taking place. Let us pledge to end cybercrimes and protect our citizens from the fraudulent monsters.

-Sheetal Mehta
Group CISO - Wipro Limited

# ಪ್ರಮುಖ ಸೈಬರ್ ಸುದ್ದಿ

## ಸರ್ಕಾರಕ್ಕೆ 1 ತಿಂಗಳಲ್ಲಿ ಡಿಜಿಟಲ್ ಪಾವತಿ ಮೋಸದ 61,000 ದೂರುಗಳು ಬಂದಿವೆ

ಒಂದು ತಿಂಗಳಲ್ಲಿ, ಸರ್ಕಾರಕ್ಕೆ ಹೆಚ್ಚು ಕಡಿಮೆ 61,000 ಡಿಜಿಟಲ್ ಪಾವತಿ ಮೋಸದ ದೂರುಗಳು ಬಂದಿವೆ. ಅರ್ಧಕ್ಕಿಂತ ಹೆಚ್ಚಿನ ಈ ದೂರುಗಳು (33,712) UPI ಗೆ ಸಂಬಂಧಿಸಿವೆ. ಅದರ ಬಳಿಕ 10,898 ದೂರುಗಳು ಡೆಬಿಟ್ ಇಲ್ಲವೇ ಕ್ರೆಡಿಟ್ ಕಾರ್ಡ್ ಮೋಸ ಇಲ್ಲವೇ ಸಿಮ್ ಕಾರ್ಡ್ ಅದಲು ಬದಲಿಗೆ ಸಂಬಂಧಿಸಿವೆ.
ಇನ್ನು ಉಳಿದ ಅಪರಾಧಗಳು, ಇ-ವಾಲೆಟ್ ಕಳ್ಳತನ (3,010), ಡಿಮ್ಯಾಟ್ ಖಾತೆ ಮೋಸ (769), ಇಂಟರ್‌ನೆಟ್ ಬ್ಯಾಂಕಿಂಗ್ ಮೋಸ (7,099), ಫೋನ್ ಕರೆಯ ಮೂಲಕ ಮೋಸ (5,503) ಹಾಗೂ ಇಮೇಲ್ ಖಾತೆಯ ಕಳ್ಳತನ (187) ಗಳನ್ನು ಒಳಗೊಂಡಿವೆ.

## ಅಗ್ನಿಪತ್ ಯೋಜನೆ: ಸುಳ್ಳು ಸುದ್ದಿ ಹರಡಿದ 35 ವಾಟ್ಸಾಪ್ ಗುಂಪುಗಳನ್ನು ತಡೆಹಿಡಿಯಲಾಗಿದೆ

ಅಗ್ನಿಪತ್ ನೇಮಕಾತಿ ಯೋಜನೆಗೆ ಸಂಬಂಧಿಸಿದಂತೆ, “ಸುಳ್ಳು ಮಾಹಿತಿ” ಹರಡಿದ್ದಕ್ಕಾಗಿ, “ಸಾಮಾಜಿಕ ಜಾಲತಾಣ ಅಪರಾಧಿಗಳ” ಎದುರು ಸಮರ ಸಾರಿರುವ ಸರ್ಕಾರವು, 35 ವಾಟ್ಸಾಪ್ ಗುಂಪುಗಳನ್ನು ತಡೆಹಿಡಿದಿದೆ. ಜೊತೆಗೆ, “ಸುಳ್ಳು ಸುದ್ದಿ” ಹರಡಿ ಜನರನ್ನು ಜಮಾಯಿಸಿದ್ದಕ್ಕೆ ಹತ್ತು ಮಂದಿಯನ್ನು ಸೆರೆಯಲ್ಲಿಡಲಾಗಿದೆ.
ಇಂತಹ ಯಾವುದೇ ಗುಂಪು ಕಂಡುಬಂದಲ್ಲಿ, ನಾಗರಿಕರು ಪಿಐಬಿ (ಪತ್ರಿಕಾ ಮಾಹಿತಿ ಬ್ಯೂರೊ) ಫ್ಯಾಕ್ಟ್ ಚೆಕ್ ತಂಡದ ನಂಬರ್ 8799711259 ಗೆ ಕರೆಮಾಡಿ ದೂರು ಸಲ್ಲಿಸಬೇಕೆಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ. ಏಕೆಂದರೆ, ತುಂಬ ರಾಜ್ಯಗಳಲ್ಲಿ ಈ ಮಿಲಿಟರಿ ನೇಮಕಾತಿ ಯೋಜನೆಯ ಎದುರಾಗಿ ಹಿಂಸಾತ್ಮಕ ಪ್ರತಿಭಟನೆಗಳು ಹಾಗೂ ಬೆಂಕಿ ದಾಳಿಗಳು ನಡೆದಿವೆ.

## ಡೇಕೇರ್ ಮಾನಿಟರಿಂಗ್ ಅಪ್ಲಿಕೇಶನ್‌ಗಳು “ಅಪಾಯಕಾರಿಯಾಗಿ ಅಸುರಕ್ಷಿತ” ಎಂದು ವರದಿ ಹೇಳುತ್ತದೆ

ಎಲೆಕ್ಟ್ರಾನಿಕ್ ಫ್ರಾಂಟಿಯರ್ ಫೌಂಡೇಶನ್ (ಇಎಫ್‌ಎಫ್) ಹೊರಪಡಿಸಿರುವ ಹೊಸ ಸಂಶೋಧನೆಯ ಪ್ರಕಾರ, ಹೆಸರುವಾಸಿಯಾದ ಮಕ್ಕಳ ಆರೈಕೆ ಮತ್ತು ಡೇ-ಕೇರ್ ಆಪ್‌ಗಳು “ಅಪಾಯಕಾರಿಯಾಗಿ ಅಸುರಕ್ಷಿತ”ವಾಗಿವೆ. ಇವುಗಳಲ್ಲಿರುವ ಸಾಕಾಗದ ಸೆಕ್ಯೂರಿಟಿ ಸೆಟಿಂಗ್‌ಗಳು ಮತ್ತು ಸುಳ್ಳಿನಿಂದ ಕೂಡಿದ ಗೌಪ್ಯತೆ ಪಾಲಿಸಿಗಳಿಂದಾಗಿ, ಡೇಟಾ ಕಳ್ಳತನ ಉಂಟಾಗಿ, ಮಕ್ಕಳು ಮತ್ತು ಹೆತ್ತವರಿಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ.
ಈ ಸಂಶೋಧನೆ ಹೇಳುವಂತೆ, ಬ್ರೈಟ್‌ವೀಲ್, ಹಾಯ್‌ಮಾಮ ಮತ್ತು ಟ್ಯಾಡ್‌ಪೋಲ್‌ನಂತಹ ಹೆಸರುವಾಸಿ ಆಪ್‌ಗಳು ಎರಡು-ಹಂತದ ದೃಢೀಕರಣ (2FA) ಬಳಸುವುದಿಲ್ಲ. ಇದರಿಂದಾಗಿ, ಕಳ್ಳರು ಬಳಕೆದಾರರ ಪಾಸ್‌ವರ್ಡ್ ಸುಲಭವಾಗಿ ಪಡೆದು, ದೂರದಿಂದ ಲಾಗಿನ್ ಮಾಡುವುದು ಸಾಧ್ಯವಾಗುತ್ತದೆ.

## Apple ನ ಹೊಸ ಫೀಚರ್, ಪೂರ್ತಿ ಆಪರೇಟಿಂಗ್ ಸಿಸ್ಟಮ್ ಅಪ್‌ಡೇಟ್ ಮಾಡದೆ ಸೆಕ್ಯೂರಿಟಿ ಅಪ್‌ಡೇಟ್‌ಗಳನ್ನು ತಾನಾಗಿಯೇ ಇನ್‌ಸ್ಟಾಲ್ ಮಾಡುತ್ತದೆ




iOS 16 ಮತ್ತು macOS ವೆಂಚುರಾದಲ್ಲಿ, Apple ಕಂಪನಿಯು, ರ್‍ಯಾಪಿಡ್ ಸೆಕ್ಯೂರಿಟಿ ರೆಸ್ಪಾನ್ಸ್ ಸೌಲಭ್ಯವನ್ನು ಸೇರಿಸಿದೆ. ಇದರಿಂದಾಗಿ, ಪೂರ್ತಿ ಆಪರೇಟಿಂಗ್ ಸಿಸ್ಟಮ್ ಅಪ್‌ಡೇಟ್ ಮಾಡದೆ ಬರೀ ಸೆಕ್ಯೂರಿಟಿ ಅಪ್‌ಡೇಟ್‌ಗಳನ್ನು ಇನ್‌ಸ್ಟಾಲ್ ಮಾಡಬಹುದು. iOS ನೊಂದಿಗೆ ಕೂಡ ಹೊಂದಿಕೊಳ್ಳುವ ಈ ಸೌಲಭ್ಯವು, ಅಗತ್ಯವಾದ ಸೆಕ್ಯೂರಿಟಿ ಅಪ್‌ಗ್ರೇಡ್ ಮತ್ತು ಸಾಮಾನ್ಯವಾದ ಸಾಫ್ಟ್‌ವೇರ್ ಅಪ್‌ಡೇಟ್ ನಡುವಿನ ವ್ಯತ್ಯಾಸವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಈ ಸೌಲಭ್ಯ ತಾನಾಗಿಯೇ ಸೇರಿಕೊಂಡಿದೆ. ಇದರಿಂದ, ಅನಧಿಕೃತ ಒಳನುಗ್ಗಿಕೆ ಹಾಗೂ ಹೊರಗಿನ ಅಪಾಯಗಳಿಂದ ಬಳಕೆದಾರರಿಗೆ ರಕ್ಷಣೆ ಸಿಗುತ್ತದೆ.

## ಕಳೆದ ವರ್ಷ ಭಾರತದ 37% ಸಂಸ್ಥೆಗಳಲ್ಲಿ ಕ್ಲೌಡ್ ಡೇಟಾ ಕಳ್ಳತನವಾಗಿತ್ತು: ವರದಿ

ಹೊಸ ವರದಿಯ ಪ್ರಕಾರ, ಕಳೆದ ಬಾರಿಯ 33% ಅಂಕಿಗೆ ಹೋಲಿಸಿದರೆ, ಈ ಬಾರಿ 37% ಗಿಂತ ಹೆಚ್ಚಿನ ಭಾರತೀಯ ಸಂಸ್ಥೆಗಳಲ್ಲಿ, ಕಳೆದ 12 ತಿಂಗಳಲ್ಲಿ ಕ್ಲೌಡ್-ಆಧಾರಿತ ಡೇಟಾ ಕಳ್ಳತನ ಇಲ್ಲವೇ ಆಡಿಟ್ ಫೇಲ್ ಆಗಿವೆ. “2022 ಥ್ಯಾಲೆಸ್ ಕ್ಲೌಡ್ ಸೆಕ್ಯೂರಿಟಿ ರಿಪೋರ್ಟ್” ಪ್ರಕಾರ, ಸುಮಾರು 46% ಭಾರತೀಯ ಸಂಸ್ಥೆಗಳು ತಮ್ಮ ಹೆಚ್ಚಿನ ಗುಟ್ಟಾದ ಡೇಟಾವನ್ನು ಕ್ಲೌಡ್‌ನಲ್ಲಿ ಕೂಡಿಡುತ್ತವೆ.
ಹಲವಾರು ಕ್ಲೌಡ್‌ಗಳಿರುವ ಏರ್ಪಾಟಿನಲ್ಲಿ ಡೇಟಾ ಕಾಪಾಡಲು, ಭಾರತದ ಐಟಿ ಪರಿಣತರು ಎನ್‌ಕ್ರಿಪ್ಶನ್ ಅನ್ನು ಒಂದು ಪ್ರಮುಖ ಭದ್ರತೆಯ ಕ್ರಮವಾಗಿ ಪರಿಗಣಿಸುತ್ತಾರೆ.

## 11 ಕೋಟಿ ರೈತರ ವೈಯಕ್ತಿಕ ಮಾಹಿತಿ ತೆರೆದಿಟ್ಟ ಹೊಸ ಆಧಾರ್ ಡೇಟಾ ಸೋರಿಕೆ

ಭಾರತ ಸರ್ಕಾರದ ವೆಬ್‌ಸೈಟ್‌ನಲ್ಲಿನ ದೋಷದಿಂದಾಗಿ, ಕೋಟಿಗಟ್ಟಲೆ ಭಾರತದ ರೈತರ ಆಧಾರ್ ಮಾಹಿತಿ ಆನ್‌ಲೈನ್‌ನಲ್ಲಿ ಬಟಾಬಯಲಾಗಿತ್ತು. ಇದನ್ನು ಕಂಡುಹಿಡಿದದ್ದು, ಅತುಲ್ ನಾಯರ್ ಎಂಬ ಭದ್ರತೆಯ ಸಂಶೋಧಕ. ಭಾರತ ಸರ್ಕಾರದ ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ವೆಬ್‌ಸೈಟ್, ಈ ಯೋಜನೆಯ ಲಾಭ ಪಡೆಯುತ್ತಿರುವ ರೈತರ ಆಧಾರ್ ಮಾಹಿತಿಯನ್ನು ಬಯಲುಮಾಡಿತ್ತು. ರೈತರ ಆಧಾರ್ ನಂಬರ್ ಒದಗಿಸುವ ಒಂದು ವಿಭಾಗ ವೆಬ್‌ಸೈಟ್‌ನಲ್ಲಿತ್ತು. ಈ ವೆಬ್‌ಸೈಟ್‌ನಲ್ಲಿನ ಡ್ಯಾಶ್‌ಬೋರ್ಡ್ ಫೀಚರ್‌ನಿಂದ, ಹಲವಾರು ಚಾರ್ಟ್ ಮತ್ತು ಡೇಟಾ ನೋಡಬಹುದು. ಸಂಶೋಧಕರು ಹೇಳುವಂತೆ, “ಸ್ಥಳದ (ರಾಜ್ಯ, ಜಿಲ್ಲೆ, ಹಳ್ಳಿ) ಆಧಾರದ ಮೇಲೆ, ಡ್ಯಾಶ್‌ಬೋರ್ಡ್‌ನಲ್ಲಿನ ಎಂಡ್‌ಪಾಯಿಂಟ್ ಒಂದು ಎಲ್ಲಾ ರೈತರ ಆಧಾರ್ ನಂಬರ್‌ಗಳನ್ನು ಸೋರಿಕೆ ಮಾಡುತ್ತಿತ್ತು.”

# TOP CYBER NEWS

## Govt receives 61k complaints of digital payment fraud in 1 month

In one month, the government received almost 61k reports of digital payment fraud. More than half of these complaints—33,712—were over the Unified Payments Interface (UPI), followed by 10,898 complaints concerning scams involving debit or credit cards or SIM card swapping.
The remaining crimes included thefts from e-wallets (3,010), Demat account frauds (769), frauds involving internet banking (7,099), and fraud or voice phishing calls (5,503), and email takeovers (187).

## Agnipath Scheme: 35 WhatsApp groups banned for spreading fake news

35 WhatsApp groups have been suspended by the government as part of a campaign against "social media culprits" for "spreading misinformation" over the Agnipath Recruitment scheme. Furthermore, ten people have been detained for organising rallies and spreading "fake news."
The Center has advised citizens to report any such group on the PIB fact check team number, which is 8799711259. This is because there have been violent protests and arson attacks against the military recruitment plan in many states.

## Report reveals that daycare monitoring applications are "dangerously unsecure"

According to newly published research by Electronic Frontier Foundation (EFF), popular childcare and day-care communication apps are "dangerously insecure," putting kids and parents at risk for data breaches due to inadequate security settings and liberal or flat-out false privacy policies.
According to the research, popular apps like Brightwheel, HiMama, and Tadpoles do not use two-factor authentication (2FA), making it possible for any malicious party to access a user's password to log in remotely.

## Apple's new feature will automatically install security updates without a full OS update.




In iOS 16 and macOS Ventura, Apple has added a Rapid Security Response capability that enables the deployment of security updates without requiring a complete operating system update. The function, which is also compatible with iOS, attempts to distinguish between essential security upgrades and routine software updates. It is automatically implemented so that users are immediately protected from unauthorized intrusions and outside dangers.

## 37% of firms in India experienced a Cloud data breach in the past year: Report

According to a new report, more than 37% of Indian organizations —up from 33% last year—have suffered a breach of cloud-based data or a failed audit during the previous 12 months. Nearly 46 percent of organizations in India store most of their sensitive data in the cloud, according to the "2022 Thales Cloud Security Report". Indian IT specialists consider encryption a crucial security measure for protecting data in multi-cloud systems.

## New Aadhar data leaks expose personal data of 11 crore farmers

Millions of Indian farmers' Aadhaar data was exposed online due to a flaw in the government of India's website. Atul Nair, a security researcher, found that the Pradhan Mantri Kisan Samman Nidhi website of the Indian government exposed Aadhaar-related data of farmers receiving benefits from the scheme.
The website had a section that provided farmers' Aadhaar numbers. A dashboard feature on the PM Kisan website allows you to view various charts and data. "An endpoint in the dashboard was leaking Aadhaar numbers of all the farmers based on location (state, district, village)," according to the researcher.

- **<u>ಆನ್‌ಲೈನ್ ಮೋಸದಲ್ಲಿ ₹30,000 ಕಳೆದುಕೊಂಡ ವ್ಯಕ್ತಿ</u>**

ಲಕ್ನೌ‌ನ ವ್ಯಾಪಾರಿಯೊಬ್ಬರು ಮೋಸಹೋಗಿ ₹30,000 ಕ್ಕಿಂತ ಹೆಚ್ಚಿನ ಹಣ ಕಳೆದುಕೊಂಡರು. ಮೋಸಗಾರನು, ಕೊರಿಯರ್ ಕಂಪನಿ ಏಜೆಂಟ್ ಸೋಗಿನಲ್ಲಿ ವ್ಯಾಪಾರಿಗೆ ಕರೆ ಮಾಡಿದ್ದನು. ಅವನ ಮಾತನ್ನು ನಂಬಿ, ವ್ಯಾಪಾರಿಯು ನೋಂದಣಿ ಫಾರಮ್ ತುಂಬಿದರು. ಆಗ ಅವರಿಗೆ ತಮ್ಮ ಬ್ಯಾಂಕ್ ಖಾತೆಯಿಂದ ₹30,000 ಕಡಿತಗೊಂಡಿರುವುದರ ಬಗ್ಗೆ ನೋಟಿಸ್ ಬಂದಿತು.

- **<u>ಆನ್‌ಲೈನ್ ಮೋಸದಲ್ಲಿ ರೂ. 16 ಲಕ್ಷ ಕಳೆದುಕೊಂಡ ಲಕ್ನೌ‌ನ ಕುಟುಂಬ</u>**

ಆನ್‌ಲೈನ್ ಮೋಸದ ಬಲೆಗೆ ಬಿದ್ದ ಲಕ್ನೌ‌ನ ಕುಟುಂಬವೊಂದು ಚಿಟಿಕೆ ಹೊಡೆಯುವಷ್ಟರಲ್ಲಿ 16 ಲಕ್ಷ ರೂಪಾಯಿ ಕಳೆದುಕೊಂಡಿತು. ಮೋಸಗಾರರು ಈ ಕುಟುಂಬದವರ ನಕಲಿ ಆಧಾರ್ ಕಾರ್ಡ್ ಸಲ್ಲಿಸಿ, ಅವರ ಫೋನ್ ನಂಬರ್ ಪಡೆದರು. ಹಣ ಕಡಿತಗೊಂಡಿರುವುದು ತಿಳಿದಾಗ, ಈ ಕುಟುಂಬದವರು ಬ್ಯಾಂಕನ್ನು ಸಂಪರ್ಕಿಸಿದರು. ಆಗ ಮೋಸಗಾರರೇ ಹಣ ದೋಚಿರುವುದಾಗಿ ಬ್ಯಾಂಕ್ ತಿಳಿಸಿತು.

- **<u>ಇಂಟರ್‌ನೆಟ್ ಮೋಸದಲ್ಲಿ ರೂ.1.15 ಲಕ್ಷ ಕಳೆದುಕೊಂಡ ಆದಾಯ ತೆರಿಗೆ ಉದ್ಯೋಗಿ</u>**

ಆದಾಯ ತೆರಿಗೆ ಉದ್ಯೋಗಿಯೊಬ್ಬರ ಫೋನಿಗೆ ಒಂದು ಸಂದೇಶ ಬಂದಿತು. ಅದರಲ್ಲಿ, ಹಳೆಯ ಬಿಲ್ ಕಟ್ಟದೆ ಬಾಕಿ ಉಳಿಸಿಕೊಂಡಿರುವುದರಿಂದ ಅವರ ವಿದ್ಯುತ್ ಕನೆಕ್ಶನ್ ಕಡಿತ ಮಾಡಲಾಗುವುದೆಂದು ಹಾಗೂ ಅದನ್ನು ತಡೆಯಲು ಸಂಪರ್ಕಿಸಬೇಕಾದ ಫೋನ್ ನಂಬರ್ ಒಂದನ್ನು ಬರೆಯಲಾಗಿತ್ತು. ಅವರು ಮಾತಾಡುತ್ತಿದ್ದಾಗಲೇ, ನೆಟ್ ಬ್ಯಾಂಕಿಂಗ್ ಆಪ್ ತೆರೆದುಕೊಂಡಿತು. ಅವರು ಮೋಸ ಹೋಗುತ್ತಿದ್ದಾರೆ ಎಂದು ಅರಿವಾದ ಕೂಡಲೇ ಕರೆಯನ್ನು ಕೊನೆಗೊಳಿಸಲು ನೋಡಿದರು. ಆದರೆ ಕಾಲ ಮಿಂಚಿ ಹೋಗಿತ್ತು. ಅವರು ಬ್ಯಾಂಕ್ ತಲುಪಿದಾಗ, ಮೂರು ವಹಿವಾಟುಗಳಲ್ಲಿ ರೂ. 1,14,899 ತೆಗೆದಿರುವುದಾಗಿ ಅವರಿಗೆ ತಿಳಿಸಲಾಯಿತು.



- **<u>“Any Desk” ಆಪ್ ಮೂಲಕ, ಆನ್‌ಲೈನ್ ಮೋಸದಲ್ಲಿ ರೂ.72,000 ಕಳೆದುಕೊಂಡ ಹೆಂಗಸು.</u>**

ಒಂದು ಆಪ್‌ನಲ್ಲಿ ಹಲವು ಐಟಮ್‌ಗಳನ್ನು ಆರ್ಡರ್ ಮಾಡಿದ್ದರೂ, ಅವು ಯಾವುವೂ ತನಗೆ ತಲುಪಿಲ್ಲ ಎಂದು 28 ರ ಹರೆಯದ ಹೆಂಗಸು ಹೇಳಿದ್ದಾರೆ. ಅವರು ಕಸ್ಟಮರ್ ಕೇರ್ ನಂಬರ್‌ಗಾಗಿ ಗೂಗಲ್‌ನಲ್ಲಿ ಹುಡುಕಿದಾಗ, ಮೊದಲು ಕಾಣಿಸಿಕೊಂಡ ನಂಬರ್‌ಗೆ ಕರೆ ಮಾಡಿದ್ದಾರೆ. ಅವರ ಫೋನ್ ಕರೆಗೆ ಉತ್ತರಿಸಿದ ಮೋಸಗಾರನು, “Any Desk” ಆಪ್ ಡೌನ್‌ಲೋಡ್ ಮಾಡುವಂತೆ ಹೇಳಿದ್ದಾನೆ. ಆ ಹೆಂಗಸಿನ ಬ್ಯಾಂಕ್ ಖಾತೆಯಿಂದ ಮೊದಲು ರೂ. 19,000 ಕಳುಹಿಸಿಕೊಂಡು, ಆಮೇಲೆ ರೂ. 53,000 ಕಳುಹಿಸಿಕೊಂಡಿದ್ದಾನೆ.

- **<u>ನಕಲಿ ಆನ್‌ಲೈನ್ ಬುಕಿಂಗ್‌ನಲ್ಲಿ ಇಬ್ಬರು ಭಕ್ತರಿಗೆ ಮೋಸ</u>**

ಭಕ್ತರು ಗೋಲ್ಡನ್ ಟೆಂಪಲ್ ನೋಡಲು ಬಂದಿದ್ದರು. ಅವರು ಉಳಿದುಕೊಳ್ಳಲು ಆನ್‌ಲೈನ್ ಬುಕಿಂಗ್ ಮಾಡಿದ್ದರು. ಹೋಟೆಲ್ ತಲುಪಿದಾಗ, ಅವರು ಕೋಣೆಗಳನ್ನು ಕಾದಿರಿಸಿದ ವೆಬ್‌ಸೈಟ್ ನಕಲಿ ಎಂಬುದು ತಿಳಿಯಿತು. ಅವರಿಗೆ 1,500 ರೂಪಾಯಿ ಮೋಸವಾಯಿತು.



- **Man duped of ₹30,000 in online fraud**

In a phishing scam, a businessman in Lucknow lost more than Rs 30,000. The fraudster, disguised as an agent from the courier company called the businessman. Believing the fraudster, the victim filled out a registration form, upon which he received a notice indicating a deduction of Rs 30,000 from his bank account.

- **Online fraud costs a Lucknow family Rs. 16 lakh**

A Lucknow family fell prey to an online scam and lost Rs 16 lakh in no time. The fraudsters submitted the victim's fake Aadhar card to obtain their phone number. Upon realising the loss, the victim contacted the bank and was informed that the miscreants had withdrawn the money.

- **An internet scam cost an Income Tax employee Rs. 1.15 lakh**

The Income Tax employee received a message on his phone informing him that his electrical connection was about to be cut off due to past due bills, along with a phone number to contact to stop that. The net banking app opened simultaneously as he was speaking. The victim attempted to end the call as soon as he realized he was being tricked but was unsuccessful. Upon reaching the bank, he was told that Rs 1,14,899 had been withdrawn in three transactions.



- **Through "Any Desk" app, a woman loses Rs 72,000 to online fraud.**

A 28-year-old woman said that despite ordering several items using an app, they were never delivered to her. The victim looked up the customer care number on Google and called the numbers that popped up first. The fraudster who picked up the victim's call made her download the "Any Desk" app and duped her by first transferring Rs 19,000 and later Rs 53,000 from her bank account.

- **Two devotees duped in fake online booking scam**

The devotees had come to visit the Golden Temple and had booked accommodation online. Upon reaching the destination, they realized that the portal they booked their rooms from was fake. The victims were duped of Rs 1,500 in the process.



# ಹೊಣೆಗಾರಿಕೆಯಿಂದ ವಾಟ್ಸಾಪ್ ಬಳಸಿ





**ಸುಳ್ಳು ಸುದ್ದಿ ಹರಡಲು ಅಡಿಗಡಿಗೆ ವಾಟ್ಸಾಪ್ ಬಳಸಲಾಗುತ್ತದೆ. ನಂಬಲಾಗದ ಮಾಹಿತಿಯಿರುವ ತಪ್ಪು ಮೆಸೇಜ್‌ಗಳು ವಾಟ್ಸಾಪ್ ಬಳಕೆದಾರರಿಗೆ ಬರುತ್ತಲೇ ಇರುತ್ತವೆ. ಹಾಗಾಗಿ, ವಾಟ್ಸಾಪ್‌ನಲ್ಲಿ ಬಂದ ಮಾಹಿತಿಯನ್ನು ಮುಂದೆ ನೀವು ಹೇಗೆ ಹಂಚುತ್ತೀರಿ ಎಂಬುದು ತುಂಬ ಮುಖ್ಯವಾಗುತ್ತದೆ.**



1.ವಾಟ್ಸಾಪ್‌ನಲ್ಲಿ ಮೆಸೇಜ್ ಅನ್ನು ಮುಂದೆ ದಾಟಿಸುವಾಗ, ಮೆಸೇಜ್‌ನ ಮೂಲ ಕಳೆದುಹೋಗುತ್ತದೆ. ಹಾಗಾಗಿ, ಸುದ್ದಿ ಹಂಚಲು ಅದು ಒಳ್ಳೆಯ ಜಾಗವಲ್ಲ.




2.ಕುಟುಂಬ ಇಲ್ಲವೇ ಗೆಳೆಯರೊಂದಿಗೆ ಮಾತುಕತೆ ನಡೆಸಲು ವಾಟ್ಸಾಪ್ ಚೆನ್ನಾಗಿದೆ. ಸತ್ಯಸಂಗತಿ ಇಲ್ಲವೇ ಸುದ್ದಿ ಹಂಚಲು ಅದು ಸೂಕ್ತವಲ್ಲ.



3.ಯಾವುದೇ ಮೆಸೇಜ್ ಅನ್ನು ಮುಂದೆ ದಾಟಿಸುವ ಮೊದಲು, ಅದು ನಿಜ ಎಂದು ಖಚಿತಪಡಿಸಿಕೊಳ್ಳಿ. ಗೂಗಲ್‌ನಲ್ಲಿ ಹುಡುಕಿದರೆ, ಹೆಚ್ಚಿನ ಬಾರಿ ಮೆಸೇಜ್ ನಿಜವೋ ಸುಳ್ಳೋ ಎಂದು ತಿಳಿಯುತ್ತದೆ.

4.ಸುಳ್ಳು ಸುದ್ದಿಯಿಂದ ಸಮಾಜ ಸೊರಗುತ್ತದೆ. ಹೊಣೆಹೊತ್ತ ನಾಗರಿಕರಾಗಿ.

# Use WhatsApp responsibly





**WhatsApp is frequently used to spread false information. WhatsApp users often receive false messages with unreliable information. Thus, the information you receive over WhatsApp and how you further communicate the same becomes important.**



*1. When a message gets forwarded on WhatsApp, the source of the message is lost. Hence it is not a good platform for news.*




*2. What is WhatsApp good for is for casual communication with family / friends, and not for sharing of facts / news.*



*3. Before forwarding any message, verify the truth and then only share it. A simple search on Google will mostly verify if the message is factual or not.*

*4. Fake news weakens the society. Be a responsible citizen.*


ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ಕಸ್ಟಮರ್ ಕೇರ್ ವಂಚನೆಗಳ ಬಗ್ಗೆ ಜಾಗೃತರಾಗಿ
@CySecKCoE




ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ಇಂಟರ್ನೆಟ್ ಬ್ರೌಸ್ ಮಾಡಲು ನಿಮ್ಮ ಆಫೀಸ್ ಕಂಪ್ಯೂಟರ್ ಬಳಸದಿರಿ.
ಈಗಲೇ ಭಾಗವಹಿಸಿ ಮತ್ತು ಐಷಾರಾಮಿ ಪ್ರವಾಸ ನಿಮ್ಮದಾಗಿಸಿ
@CySecKCoE




ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ಕಂಪ್ಯೂಟರ್ ಬಳಸದಿರುವಾಗ ಅದನ್ನು ಲಾಕ್ ಮಾಡಿ.
@CySecKCoE



# AWARENESS POSTERS














## Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು cybercrime.gov.in
- ತಪ್ಪು ಮಾಹಿತಿ ಗುರುತಿಸಲು -https://factcheck.ksp.gov.in
- ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**

# CONGRATULATIONS

## Contest Winners

| Rank | Name |
|---|---|
| 1 | DR. DILEEP . P |
| | TEJASHWINI . D |
| | YASHVARDHAN PANDA |

| Rank | Name |
|---|---|
| 2 | NANDEESH YR |
| | AKSHAYA KUMARI |
| | PATNANA SAYESU |
| | AJAY KUMAR.S |
| | GURUPRASAD B T |
| | SYAM KUMAR NAGIREDDI |
| | DILEEP P |
| | RAJ BHARDWAJ |
| | ARUN KUMAR TERADAL |





ಸೈಬರ್ ವರ್ತಿಕಾ ವಾರ್ಷಿಕೋತ್ಸವದ ಆವೃತ್ತಿಯನ್ನು ಮಾನ್ಯ ಸಚಿವ ಅಶ್ವಥ್ ನಾರಾಯಣ ಅವರು 2 ಜೂನ್ 2022 ರಂದು ಬಿಡುಗಡೆ ಮಾಡಿದರು.

The anniversary edition of Cyber Vartika was released by the Honourable Minister Ashwath Narayan on 2 June 2022.

- ಡಿಪ್ಲೊಮ ವಿದ್ಯಾರ್ಥಿಗಳು ಆಯ್ಕೆಮಾಡಬಹುದಾದ 'ಸೈಬರ್ ಸುರಕ್ಷತೆ' ವಿಷಯದ ಪಠ್ಯವನ್ನು ಸಿದ್ಧಪಡಿಸಲು ತಾಂತ್ರಿಕ ಶಿಕ್ಷಣ ಇಲಾಖೆಗೆ ನೆರವಾಗುವಂತೆ, 2022 ರ ಜೂನ್ 4 ಮತ್ತು ಜೂನ್ 18 ರಂದು ಎರಡು ಹಂತಗಳ ಕಮ್ಮಟಗಳನ್ನು CySecK ಏರ್ಪಡಿಸಿತ್ತು. ಈ ಸೆಪ್ಟೆಂಬರ್ನಿಂದ, ಡಿಪ್ಲೊಮ ವಿದ್ಯಾರ್ಥಿಗಳು ತಮ್ಮ ಕೊನೆಯ ವರ್ಷದಲ್ಲಿ ಸೈಬರ್ ಸುರಕ್ಷತೆ ವಿಷಯದಲ್ಲಿ ಪರಿಣತಿ ಪಡೆಯುವ ಆಯ್ಕೆ ಹೊಂದಿರುತ್ತಾರೆ. ಕಮ್ಮಟದಲ್ಲಿ ಪಾಲ್ಗೊಂಡಿದ್ದ ಉದ್ಯಮ ಮತ್ತು ಶಿಕ್ಷಣ ಪರಿಣತರು, ಪಠ್ಯಕ್ರಮದ ತಯಾರಿಯನ್ನು ಬೆಂಬಲಿಸಿದರು.

- ಬೆಂಗಳೂರು ನಗರ ಪೊಲೀಸ್ ಅಧಿಕಾರಿಗಳಿಗಾಗಿ ಬ್ಲಾಕ್‌ಚೈನ್ ಮತ್ತು ಕ್ರಿಪ್ಟೊ ಹೂಡಿಕೆಗಳ ಬಗೆಗಿನ ಒಂದು-ದಿನದ ತರಬೇತಿ ಕಾರ್ಯಕ್ರಮವನ್ನು 2022 ರ ಜೂನ್ 25 ರಂದು CySecK ಏರ್ಪಡಿಸಿತ್ತು.

- CySecK conducted two rounds of workshops on 4-June-2022 and 18-June-2022 for Department of Technical Education for preparing the syllabus for Cybersecurity specialisation for Diploma students. From this September, diploma students will have the option to specialise in Cybersecurity in their final year. The workshop was attended by experts from industry and academia who supported the preparation of the syllabus.

- CySecK conducted a one-day training programme on 25-June-2022 for Bengaluru City police officers on blockchain and crypto assets.

# About CySecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.